ತುಮಕೂರು ನಗರ ಸಭೆಯಲ್ಲಿನ ವಿದ್ಯುತ್ ಸಾಮಾಗ್ರಿ ವೆಚ್ಚ

427 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ತುಮಕೂರು ನಗರಸಭೆಯಲ್ಲಿ ವಿದ್ಯುತ್ ಸಾಮಾಗ್ರಿ, ವಿದ್ಯುತ್ ವೆಚ್ಚಕ್ಕಾಗಿ ಖರ್ಚು ಮಾಡಿದ ಹಣವೆಷ್ಟು? (ವರ್ಷವಾರು ಮಾಹಿತಿ ನೀಡುವುದು)*

ಆ) *ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮಕ್ಕೆ ನಗರಸಭೆಯ ಬಾಕಿ ಇದೆಯೇ; ಹಾಗಿದ್ದಲ್ಲಿ ಬಾಕಿ ಇರುವ ಮೊತ್ತವೆಷ್ಟು?*

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ತುಮಕೂರು ನಗರಸಭೆಯಲ್ಲಿ ಕಳೆದ 3 ವರ್ಷಗಳಿಂದ ಖರ್ಚು ಮಾಡಿದ ವಿವರ ಈ ಕೆಳಕಂಡಂತಿದೆ.

ವರ್ಷ	ವಿದ್ಯುತ್ ಸಾಮಗ್ರಿಗಳ ಖರೀದಿಗೆ	ವಿದ್ಯುತ್ ವೆಚ್ಚ	ಒಟ್ಟು
1996-97	13,58,775	1,76,542	15,35,317
1997-98	21,52,075	4,58,395	26,10,470
1998-99	12,10,867	1,09,895	13,20,762
1999-2000	22,70,023	-	22,70,023

ಆ) ಬಾಕಿ ಮೊತ್ತ ಈ ಕೆಳಕಂಡಂತಿರುತ್ತದೆ.

1.	ನೀರಿನ ಸ್ಥಾವರಗಳ ವಿದ್ಯುತ್ ಶುಲ್ಕ ಮತ್ತು ಹೇಮಾವತಿ ನೀರಿನ ಸ್ಥಾವರ	1,13,31,758
2.	ಬೀಪ್ ದೀಪಗಳ ಶುಲ್ಕ	34,42,753
	ಒಟ್ಟು	ರೂ. **1,47,74,511**

ತುಮಕೂರು ನಗರ ಸಭೆ ಅಧೀನದಲ್ಲಿರುವ ಖಾಲಿ ನಿವೇಶನಗಳು

428 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ನಗರಸಭೆ ಅಧೀನದಲ್ಲಿರುವ ಖಾಲಿ ನಿವೇಶನಗಳೆಷ್ಟು? ಬಡಾವಣೆ, ಸ್ಥಳ ಹಾಗೂ ಅಳತೆಯೊಂದಿಗೆ ವಿವರ ನೀಡುವುದು?*

ಅ) ಕಳೆದ 3 ವರ್ಷಗಳಲ್ಲಿ ನಗರಸಭೆಯಲ್ಲಿ ಎಷ್ಟು ಪರಭಾರೆ ಮಾಡಲಾಗಿದೆ, ಹಾಗೂ ಅವುಗಳಿಂದ ಬಂದ ಆದಾಯವೆಷ್ಟು? (ಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ತುಮಕೂರು ನಗರಸಭೆಯ ಪರಿಮಿತಿಯಲ್ಲಿ ಇರುವ ಆರಳೀಮರದ ಪಾಳ್ಯ ವಸತಿ ಬಡಾವಣೆಯಲ್ಲಿ 111 ಖಾಲಿ ನಿವೇಶನಗಳಿವೆ. ಅವುಗಳ ವಿವರಗಳು ಈ ಕೆಳಕಂಡಂತಿವೆ.

ಮೂಲೆ ನಿವೇಶನಗಳು	60x40	-	17
	30x41	-	24
	25x30	-	27
ವಿವಿಧ ಅಳತೆಯುಳ್ಳವುಗಳು		-	36
ಹಂಚಿಕೆಗೆ ಲಭ್ಯವಿರುವ ನಿವೇಶನಗಳು		-	7
	ಒಟ್ಟು		**- 111**

ಆ) ಆರಳೀಮರದಪಾಳ್ಯ ವಸತಿ ಯೋಜನೆಯಲ್ಲಿ 162 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು ಸದರಿ ಹಂಚಿಕೆಯಿಂದ ರೂ. 32,44,038-00 ಗಳು ಬಂದಿರುತ್ತದೆ.

ತುಮಕೂರು ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

429 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿ ಅಂಬೇಡ್ಕರ್ ಭವನದ ನಿರ್ಮಾಣವನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು? ಪೂರ್ಣಗೊಳಿಸಲು ಬೇಕಾದ ಅವಧಿ ಎಷ್ಟು?

ಆ) ಹಿಂದುಳಿದ ವರ್ಗಗಳ ಸ್ವಾವಲಂಭನಾ ಕಾರ್ಯಕ್ರಮದಡಿ 1997-98ನೆಯ ಸಾಲಿನಿಂದ ನಿಗಧಿಪಡಿಸಿದ ಗುರಿ ಎಷ್ಟು? (ವರ್ಷಾವಾರು)

ಇ) ಗುರಿಗನುಗುಣವಾಗಿ ಸಹಾಯಧನ ಬಿಡುಗಡೆ ಮಾಡಲಾಗಿದೆಯೇ?

ಈ) ಬಿಡುಗಡೆಯಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಸಕಇ 364 ಪಜಾ 95 ದಿನಾಂಕ 22.12.95ರಲ್ಲಿ ತುಮಕೂರು ನಗರದಲ್ಲಿ ಒಂದು ಅಂಬೇಡ್ಕರ್ ಭವನ ನಿರ್ಮಿಸುವ ಸಲುವಾಗಿ 15.00 ಲಕ್ಷ ರೂ.ಗಳನ್ನು ಮಂಜೂರು ಮಾಡಿ ಆದೇಶಿಸಿದೆ. ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯು 140.00